# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್**

ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

## ಭಾಗ ೧೭

## ಮಧ್ಯಪಾಶ್ಚಾತ್ಯ ಅಮೆರಿಕೆಯ ಪ್ರವಾಸ *(ಮುಂದುವರಿದುದು)*

೧೮೯೦ರ ದಶಕದಲ್ಲಿ ಅಮೆರಿಕೆಯಲ್ಲಿ ನಾವು ನೋಡುವುದು ಸಂದಿಗ್ಧತೆಯನ್ನು, ವಿಚಿತ್ರವಾದ ವಾತಾವರಣವನ್ನು. ಒಂದು ಕಡೆ, ಅಮೆರಿಕೆಯ ಸಮಾಜ ಹಿಂದುಳಿದ ಹಾಗೆ ಕಂಡುಬರುತ್ತಿತ್ತು. ಇನ್ನೊಂದು ಕಡೆ, ಪ್ರಗತಿಶೀಲವಾಗಿ, ಪರಿಪೂರ್ಣವಾಗಿ ತೋರಿಬರುತ್ತಿತ್ತು. ಒಟ್ಟಿನಲ್ಲಿ ಅಮೆರಿಕನ್ನರು ತಮ್ಮ ದೇಶದ ಬಗ್ಗೆ ಅಪಾರವಾದ ಅಭಿಮಾನವನ್ನು ಹೊಂದಿದ್ದರು. ಭಗವಂತನ ಕೃಪೆಯಿರುವ ದೇಶ ಎಂದು ತಮ್ಮನ್ನು ತಾವು ಹೊಗಳಿಕೊಳ್ಳುತ್ತಿದ್ದರು. ಹೀಗೆ ಅಮೆರಿಕೆಯು ಒಂದು ನೂತನ ಯುಗವನ್ನು ಪ್ರವೇಶಿಸುತ್ತಿತ್ತು.


ಸರ್ವಧರ್ಮ ಸಮ್ಮೇಳನವು ಅಮೆರಿಕೆಯಲ್ಲಿ ಪ್ರಚಲಿತವಿರುವ ಎರಡು ವಿಭಿನ್ನ ಧಾರ್ಮಿಕ ಭಾವನೆಗಳನ್ನು ಎತ್ತಿ ತೋರಿಸಿತು. ಹಳೆಯ ಜಾಯಮಾನಕ್ಕೆ ಜೋತುಬಿದ್ದುಕೊಂಡು, ಅದಕ್ಕಾಗಿ ಸಂಘರ್ಷ ಮಾಡುವುದು ಒಂದು ಧಾರ್ಮಿಕ ಭಾವನೆ. ಕ್ರೈಸ್ತಧರ್ಮದ ಹಲವಾರು ಸಂಪ್ರದಾಯಗಳು ಈ ಮನೋಭಾವನೆಯನ್ನು ಹೊಂದಿದ್ದವು. ಇವುಗಳನ್ನು 'ಮೂಲಭೂತವಾದಿಗಳು' ಎಂದು ಕರೆಯುತ್ತಾರೆ. ಆ ಕಾಲದಲ್ಲಿ ಡಾರ್ವಿನ್ ಪ್ರತಿಪಾದಿಸಿದ ಜೀವವಿಕಾಸ ವಾದವನ್ನು ಇದರ ಅನುಯಾಯಿಗಳು ವಿರೋಧಿಸುತ್ತಿದ್ದರು.

ಇದೇ ಸಂದರ್ಭದಲ್ಲಿ ಉದಾರವಾದ ಕ್ರೈಸ್ತಧರ್ಮದ ಅನುಯಾಯಿಗಳೂ ಹಲವರು ಇದ್ದರು. ಅವರೆಲ್ಲ ಮಾನವ ಇತಿಹಾಸದಲ್ಲಿ ಉಂಟಾಗುವ ನೂತನ ಅನ್ವೇಷಣೆಗಳನ್ನು ಸ್ವಾಗತಿಸುತ್ತಿದ್ದರು. ಹಾಗೆಯೇ ಧರ್ಮವನ್ನು ಒಂದು ನೂತನ ಸಾಮಾಜಿಕ ಆಂದೋಲನವಾಗಿ ಪರಿವರ್ತಿಸುವಲ್ಲಿ ಅವರ ಪಾತ್ರ ಹಿರಿದಾಗಿತ್ತು. ಈ ಮನೋಭಾವನೆಯ ಅನುಯಾಯಿಗಳು ಸ್ವಾಮಿ ವಿವೇಕಾನಂದರನ್ನು ಮುಕ್ತವಾಗಿ ಸ್ವಾಗತಿಸಿದರು ಮತ್ತು ಅವರಿಗೆ ಪೂರ್ಣ ಬೆಂಬಲವನ್ನು ನೀಡಿದರು. ಸ್ವಾಮಿ ವಿವೇಕಾನಂದರು ಸಾಮಾನ್ಯವಾಗಿ ಬಹುತೇಕ ನಗರಗಳಲ್ಲಿ ಉದಾರ ಮನೋಭಾವದ ಜನರು ನಡೆಸುತ್ತಿದ್ದ ಯುನಿಟೇರಿಯನ್ ಅಥವಾ ಕಾಂಗ್ರಿಗೇಷನಲ್ ಚರ್ಚಿನಲ್ಲಿಯೇ ಭಾಷಣ ಮಾಡುತ್ತಿದ್ದರು.

೧೯ನೆಯ ಶತಮಾನದ ಅಮೆರಿಕೆಯಲ್ಲಿ ಟ್ರಾನ್ಸೆಂಡೆಂಟಲ್ (ಇಂದ್ರಿಯಾತೀತ ಅನುಭವ) ಆಂದೋಲನವು ಬಹಳ ಪ್ರಸಿದ್ಧವಾಗಿತ್ತು. ಈ ಉದಾರ ಪಂಥದ ಚಿಂತನೆಯು ಅಮೆರಿಕೆಯನ್ನು ಸ್ವಾಮೀಜಿಯವರ ಬೋಧನೆಗಳನ್ನು ಸ್ವೀಕರಿಸುವುದಕ್ಕೆ ಸನ್ನದ್ಧವನ್ನಾಗಿ ಮಾಡಿತ್ತು ಎಂದು ಹೇಳಬಹುದು. ಈ ಪಂಥವು ಬೆಳೆದು ಬಂದಿದ್ದು ಎಮರ್‌ಸನ್, ಥೋರೋ ಮತ್ತು ಬ್ರಾನ್‌ಸನ್ ಅಲ್ಕಾಟ್ ಮುಂತಾದ ಪ್ರಸಿದ್ಧ ಬರಹಗಾರರ ಆಧ್ಯಾತ್ಮಿಕ ಚಿಂತನೆಯ ಬರಹಗಳಿಂದ. ಈ ಚಿಂತನೆಯು ಭೌತಿಕವಾದವನ್ನು ಸಾರಾಸಗಟಾಗಿ ವಿರೋಧಿಸುತ್ತಿತ್ತು. ಅದು ಅಂದಿನ ಪೀಳಿಗೆಯ ಮೇಲೆ ಬಹಳಷ್ಟು ಪರಿಣಾಮವನ್ನು ಉಂಟುಮಾಡಿತು. ಧಾರ್ಮಿಕ ಮತ್ತು ವೈಜ್ಞಾನಿಕ ಆಲೋಚನೆಗಳ ಸಮ್ಮಿಶ್ರವಾಗಿದ್ದ ಈ ಚಿಂತನೆಗಳು ಮಾನವನ ಆಧ್ಯಾತ್ಮಿಕ ಪ್ರಗತಿಯನ್ನೇ ಲಕ್ಷ್ಯವನ್ನಾಗಿ ಇಟ್ಟುಕೊಂಡಿದ್ದವು. ಮಾನವನ ಸಮಸ್ಯೆಗಳಿಗೆ ವೈಚಾರಿಕವಾದ ಪರಿಹಾರಗಳನ್ನು ಹುಡುಕಲು ಈ ಆಲೋಚನೆಗಳು ಪ್ರಯತ್ನಪಡುತ್ತಿದ್ದವು. ಹೀಗೆ ಉದಾರವಾದ, ಆಧ್ಯಾತ್ಮಿಕ ಪರಿಸರದ ಶುಭ್ರ ವಾಯುವು ಅಮೆರಿಕೆಯ ಕ್ಷಿತಿಜವನ್ನು ಆವರಿಸಿತ್ತು.

ಈ ನೂತನ ಆಧ್ಯಾತ್ಮಿಕ ಆಂದೋಲನವು ಮುಖ್ಯವಾಗಿ ಕಂಡುಬಂದಿದ್ದು ಅಮೆರಿಕೆಯ ಪೂರ್ವ ಕರಾವಳಿಯಲ್ಲಿ. ಮೂಲಭೂತವಾದಿಗಳು ಅಮೆರಿಕೆಯ ಮಧ್ಯ-ಪಶ್ಚಿಮ ಮತ್ತು ದಕ್ಷಿಣ ಪ್ರದೇಶಗಳಲ್ಲಿ ಪ್ರಬಲರಾಗಿದ್ದರು. ಹಾಗೆಯೇ 'ಚರ್ಚಿನ ಮಹಿಳೆಯರು' ಎಂದು ಸ್ವಾಮಿ ವಿವೇಕಾನಂದರು ಹೆಸರಿಸುವ ಪ್ರಬುದ್ಧ ಮಹಿಳೆಯರು ಕೂಡ ಅಮೆರಿಕೆಯ ಸಾಮಾಜಿಕ ಪರಿವರ್ತನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಈ ಮಹಿಳೆಯರು ಉದಾತ್ತ ಹೃದಯವುಳ್ಳವರು; ಸಮಾಜ ಸೇವಾತತ್ಪರರು; ಪರಿಶುದ್ಧ ಮತ್ತು ಉಜ್ವಲ ವ್ಯಕ್ತಿತ್ವದ ಭದ್ರ ಮಹಿಳೆಯರು. ಇಂಥ ಉದಾತ್ತ ಮಹಿಳಾ ವರ್ಗದವರು ಸ್ವಾಮೀಜಿಯವರ ಕ್ರಾಂತಿಕಾರಕ ವಿಚಾರಗಳನ್ನು ಸ್ವೀಕರಿಸಿದರು; ಅವರ ವ್ಯಕ್ತಿತ್ವಕ್ಕೆ ಮಾರುಹೋದರು; ಅವರಿಗೆ ಸಂಪೂರ್ಣವಾಗಿ ಬೆಂಬಲವನ್ನು ನೀಡಿದರು.

ಆ ಕಾಲದಲ್ಲಿ ಕ್ರೈಸ್ತ ಮಿಷನರಿಗಳು ಭಾರತದ ಮೇಲೆ ಇಲ್ಲಸಲ್ಲದ ಅಪಪ್ರಚಾರವನ್ನು ಮಾಡುತ್ತಿದ್ದರು. ಆಗಿನ ಕಾಲದಲ್ಲಿ ಭಾರತೀಯರ ಬಗ್ಗೆ, ಅದರಲ್ಲೂ ಹಿಂದೂಗಳ ಬಗ್ಗೆ, ಅಮೆರಿಕೆಯ ಜನರಿಗೆ ಏನೂ ಗೊತ್ತಿರಲಿಲ್ಲ. ಹೀಗಾಗಿ ಮಿಷನರಿಗಳು ಹಿಂದೂ ಸಮಾಜದ ಬಗ್ಗೆ ಸುಳ್ಳು ಮಾಹಿತಿಗಳನ್ನು ನೀಡಿ, ಜನರನ್ನು ತಪ್ಪುದಾರಿಗೆ ಒಯ್ಯುವ ಪ್ರಯತ್ನವನ್ನು ಮಾಡುತ್ತಿದ್ದರು. ಇದಲ್ಲದೆ, ಗಂಡಸರು ತಮ್ಮ ಪತ್ನಿಯರನ್ನು ಸಜೀವವಾಗಿ ಸುಡುತ್ತಾರೆ ಎಂದು ಚಿತ್ರಗಳನ್ನು ಬರೆಸಿ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದರು. ಆಗತಾನೇ ಹುಟ್ಟಿದ ಮಗುವನ್ನು ಸಾಯಲು ಬಿಡುತ್ತಾರೆ ಎಂದೂ ಚಿತ್ರಿಸುತ್ತಿದ್ದರು. ಇಷ್ಟೂ ಅಲ್ಲದೆ, ಹಿಂದೂ ತಾಯಿಯು



(THE HEATHEN MOTHER)



No. 53. *A man burning his wife alive.*

ಕ್ರೈಸ್ತ ಮಿಷನರಿಗಳು ಹಬ್ಬಿಸುತ್ತಿದ್ದ ಸುಳ್ಳು ಸುದ್ದಿಗಳು (ಚಿತ್ರ ೧ – ಮೊಸಳೆಗೆ ಮಗುವನ್ನು ನೀಡುವುದು ೨. ಪತ್ನಿಯನ್ನು ಜೀವಂತ ಸುಡುವ ಪತಿ)

ಹುಟ್ಟಿದ ಮಗುವನ್ನು ಮೊಸಳೆಯ ಬಾಯಿಗೆ ನೀಡುತ್ತಾಳೆ ಎಂದೂ, ಚಿತ್ರಗಳ ಮೂಲಕ ಬಿಂಬಿಸುತ್ತಿದ್ದರು. ಇಂಥ ಬಾಲಿಶವೂ, ಹಾಸ್ಯಾಸ್ಪದವೂ ಆದ ಹಸಿಸುಳ್ಳುಗಳನ್ನು ಅಮೆರಿಕೆಯ ಜನರು ನಂಬುತ್ತಿದ್ದರು. ಭಾರತದಲ್ಲಿರುವ ಅನಾಗರಿಕ ಜನರಿಗೆ ಕ್ರೈಸ್ತಸಂದೇಶವನ್ನು ತಲುಪಿಸುವುದಕ್ಕಾಗಿ ಕ್ರೈಸ್ತ ಮಿಷನರಿಗಳಿಗೆ ಹೇರಳವಾಗಿ ಧನಸಹಾಯವನ್ನೂ ನೀಡುತ್ತಿದ್ದರು.

ಇದಲ್ಲದೆ ಭಾರತಕ್ಕೆ ಹೋಗಿಬಂದ ಮಿಷನರಿಗಳು ಭಾರತದ ಬಗ್ಗೆ ಚಿತ್ರವಿಚಿತ್ರವಾದ ಭ್ರಮೆಯ ಚಿತ್ರಣವನ್ನು ಮೂಡಿಸುವ ಪುಸ್ತಕಗಳನ್ನು ಪ್ರಕಟಿಸುತ್ತಿದ್ದರು. ಅಂಥ ಗ್ರಂಥಗಳಲ್ಲಿ India and Its Inhabitants ಎಂಬ ಗ್ರಂಥವೂ ಒಂದು. ಇದನ್ನು ಬರೆದವನು ಕ್ಯಾಲೆಬ್ ರೈಟ್ ಎಂಬುವವನು. ಆತನು ಭಾರತವನ್ನೆಲ್ಲ ಸುತ್ತಾಡಿಬಂದು, ಮಾಹಿತಿಗಳನ್ನು ಸಂಗ್ರಹಿಸಿದ್ದಾನೆ ಎಂದು ಆ ಪುಸ್ತಕದ ಶೀರ್ಷಿಕೆಯಲ್ಲಿಯೇ ಹೊಗಳಲಾಗಿತ್ತು. ಆತನ ಪುಸ್ತಕದಲ್ಲಿ ಭಾರತದ ಬಗ್ಗೆ ಅನೇಕ ರೇಖಾಚಿತ್ರಗಳಿದ್ದವು. ಹಾಗೆಯೇ 'ಓ! ದಯವಿಟ್ಟು ಅಲ್ಲಿಗೆ ಬೈಬಲ್ಲನ್ನು ಕಳಿಸಿರಿ' ಎನ್ನುವ ಕರೆ ಮಧ್ಯೆ ಮಧ್ಯೆ ವ್ಯಕ್ತವಾಗುತ್ತಿತ್ತು. ಈ ಪುಸ್ತಕ ಅಮೆರಿಕದ ಬೌದ್ಧಿಕ ವರ್ಗದಲ್ಲಿ ಬಹಳ ಪ್ರಸಿದ್ಧವಾಗಿತ್ತು. ಪುಸ್ತಕದ ಮುನ್ನುಡಿಯಲ್ಲಿ ಅಮೆರಿಕದ ೨೦ ಪ್ರಸಿದ್ಧ ಕಾಲೇಜುಗಳ ಅಧ್ಯಕ್ಷರುಗಳು ಈ ಪುಸ್ತಕಕ್ಕೆ ಹಾಗೂ ಲೇಖಕನ ಭಾಷಣಗಳಿಗೆ ನೀಡಿರುವ ಪ್ರಶಂಸೆಗಳನ್ನು ಮುದ್ರಿಸಲಾಗಿತ್ತು. ಕೇವಲ ಎರಡು ವರ್ಷಗಳಲ್ಲಿ, ಪುಸ್ತಕದ ಎರಡು ಆವೃತ್ತಿಗಳು ಹೊರಬಂದಿದ್ದವು; ಸುಮಾರು ೩೬,೦೦೦ ಪ್ರತಿಗಳು ಮುದ್ರಣಗೊಂಡಿದ್ದವು.

ಈ ರೀತಿ ಭಾರತವನ್ನು ಮತ್ತು ಅಲ್ಲಿನ ಜನರನ್ನು ತೆಗಳುವ ಹಲವಾರು ಪುಸ್ತಕಗಳು ಈ ಸಮಯದಲ್ಲಿ ಪ್ರಕಟವಾದವು. ಈ ಬಗೆಯಲ್ಲಿ ಭಾರತದ ಬಗ್ಗೆ ಕೀಳು ಹಾಗೂ ತಾತ್ಸಾರ ಮನೋಭಾವನೆಯನ್ನು ಅಮೆರಿಕನ್ನರ ಮನಸ್ಸಿನಲ್ಲಿ ಕ್ರೈಸ್ತ ಮಿಷನರಿಗಳು ಈಗಾಗಲೇ ಉಂಟುಮಾಡಿದ್ದರು. ಹೀಗಾಗಿ ಸ್ವಾಮೀಜಿ ಅಮೆರಿಕೆಗೆ ಹೋದ ಕಾಲಮಾನದಲ್ಲಿ ಭಾರತದ ಬಗ್ಗೆ ಅಜ್ಞಾನ ಮತ್ತು ದ್ವೇಷಭಾವನೆಗಳು ತಾಂಡವವಾಡುತ್ತಿದ್ದವು. ಹೀಗಾಗಿ ಸ್ವಾಮೀಜಿ ಮಿಷನರಿಗಳು ಮತ್ತು ಅವರಿಂದ ಪ್ರಭಾವಿತವಾದ ಸಂಪ್ರದಾಯಸ್ಥ ಕ್ರೈಸ್ತಧರ್ಮೀಯರಿಂದ ಭಾರೀ ಪ್ರತಿರೋಧವನ್ನು ಅನುಭವಿಸಬೇಕಾಯಿತು. ಅವರ ನಿಂದನೆ, ಸುಳ್ಳು ಪ್ರಚಾರಗಳಿಗೆ ಒಳಗಾಗಬೇಕಾಯಿತು.

ಈ ವಿಷಪೂರಿತ ಪರಿಸ್ಥಿತಿಯಲ್ಲಿಯೂ ಕ್ರೈಸ್ತಧರ್ಮೀಯರ ಒಂದು ವರ್ಗವು ಭಾರತದ ಸಂಸ್ಕೃತಿ ಮತ್ತು ಧರ್ಮದ ಬಗ್ಗೆ ಸಹಾನುಭೂತಿಯನ್ನು ಹೊಂದಿತ್ತು. ಅಂಥ ಒಂದು ದಾಖಲೆಯು ನಮಗೆ ಚಿಕಾಗೋ ವೇದಾಂತ ಕೇಂದ್ರದ ಅಧ್ಯಕ್ಷರಾಗಿದ್ದ ಸ್ವಾಮಿ ವಿಶ್ವಾನಂದ ಅವರ ಸೌಜನ್ಯದಿಂದ ಪ್ರಾಪ್ತವಾಯಿತು. ಕಾಲಕ್ರಮೇಣ ಅದು ಸ್ಯಾನ್‌ಫ್ರಾನ್ಸಿಸ್ಕೋ ವೇದಾಂತ ಕೇಂದ್ರದ ಸ್ವಾಮಿ ಅಶೋಕಾನಂದ ಅವರ ಸುಪರ್ದಿಗೆ ಬಂದಿತು. ಮೂರು ಪುಟಗಳ ದಾಖಲೆಯ ಮೇಲೆ ಸ್ವಾಮಿ ವಿವೇಕಾನಂದರು ತಮ್ಮ ಸ್ವಹಸ್ತಾಕ್ಷರದಲ್ಲಿ ಹಲವಾರು ಗುರುತುಗಳನ್ನು ಹಾಕಿಕೊಂಡಿದ್ದರು. ಸ್ವಾಮೀಜಿ ಯಾವ ಆಕರದಿಂದ ಈ ಉಲ್ಲೇಖಗಳನ್ನು ತೆಗೆದುಕೊಂಡಿದ್ದಾರೆ ಎನ್ನುವುದು ನಿಗೂಢವಾಗಿಯೇ ಇತ್ತು. ಮೂರನೆಯ ಹಾಳೆಯ ಹಿಂಭಾಗದಲ್ಲಿ ಸ್ವಾಮೀಜಿ Louis Rousselet ಎಂಬುದಾಗಿ ನಮೂದಿಸಿದ್ದರು. ಇದರ ಅರ್ಥವೇನು ಎಂದು ಸ್ವಾಮಿ ಅಶೋಕಾನಂದರು ವಿಚಾರ ಮಾಡುತ್ತಿದ್ದರು. ಆ ಸಮಯದಲ್ಲಿಯೇ ಸ್ಯಾನ್‌ಫ್ರಾನ್ಸಿಸ್ಕೋ ವೇದಾಂತ ಕೇಂದ್ರಕ್ಕೆ ಕೆಲವು ಹಳೆಯ ಪುಸ್ತಕಗಳನ್ನು ಒಳಗೊಂಡ ಪ್ಯಾಕೆಟ್ ಬಂದಿತು. ಅದನ್ನು ಬಿಚ್ಚಿನೋಡಿದಾಗ ಕಂಡದ್ದು Louis Rousselet ಎಂಬ ಲೇಖಕನು ಬರೆದ India and Its Native Princes—Travels in Central India and in the Presidencies of Bombay and Bengal ಎನ್ನುವ ಬಹಳಕಾಲದ ಹಿಂದೆ ಮುದ್ರಿತವಾಗಿದ್ದ ಪುಸ್ತಕ. ಆ ಪುಸ್ತಕದ ೫೩೩ ನೆಯ ಪುಟದಲ್ಲಿ

ಸ್ವಾಮೀಜಿ ಉಲ್ಲೇಖಿಸಿದ ಬರಹ ಲಭ್ಯವಾಯಿತು. ಈ ಪುಸ್ತಕ ಫ್ರೆಂಚ್ ಭಾಷೆಯ ಮೂಲ ಗ್ರಂಥದ ಅನುವಾದವಾಗಿತ್ತು. ಭಾರತದ ಧರ್ಮ ಮತ್ತು ಸಂಸ್ಕೃತಿಗಳ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸುವ ಕೆಲವೇ ಕೆಲವು ಗ್ರಂಥಗಳಲ್ಲಿ ಇದೂ ಒಂದು ಎಂದು ಹೇಳಬಹುದು. ಈ ಗ್ರಂಥದಲ್ಲಿ ಲೇಖಕನು ಹೀಗೆ ಬರೆಯುತ್ತಾನೆ:

''ಸಭ್ಯರಾದ ಮೃದುಸ್ವಭಾವದವರಾದ ಹಿಂದೂ ಜನರಿಗಿಂತ ಉದಾರವಾದ ಮನೋಭಾವವುಳ್ಳ ಜನಾಂಗವು ಎಲ್ಲಿಯೂ ಕಂಡು ಬರುವುದಿಲ್ಲ. ಆದರೆ ಅವರನ್ನು ಮೋಸಗಾರರೆಂದೂ, ಕ್ರೂರಿಗಳೆಂದೂ, ರಕ್ತಪಿಪಾಸುಗಳೆಂದೂ ಬಣ್ಣಿಸಲಾಗುತ್ತಿದೆ. ಇಂಥ ಜನಾಂಗವನ್ನು ಮುಸಲ್ಮಾನರೊಡನೆಯಾಗಲಿ ಅಥವಾ ನಮ್ಮ ಜನಾಂಗದೊಡನೆಯಾಗಲಿ (ಅಮೆರಿಕನ್ನರು) ಹೋಲಿಸಿ ನೋಡಿ! ಆದರೂ ನಾವು ನಾಗರಿಕರೆಂದೂ ಉದಾರಸ್ವಭಾವವುಳ್ಳವರೆಂದೂ ನಮ್ಮನ್ನು ನಾವು ಹೊಗಳಿಕೊಳ್ಳುತ್ತೇವೆ. ಒಬ್ಬ ಚೀನಾದೇಶದ ವ್ಯಕ್ತಿಯಾಗಲಿ ಇಲ್ಲವೇ ಭಾರತೀಯನಾಗಲಿ ಒಂದು ಧಾರ್ಮಿಕ ಮತ್ತು ಇತರೆ ಸಮಾರಂಭದ ಸಮಯದಲ್ಲಿ ನಮ್ಮ ದೇಶದ ಬೀದಿಗಳಲ್ಲಿ ಓಡಾಡಲಿ ನೋಡೋಣ. ಅವನ ಕುರಿತು ನಮ್ಮ ಜನರ ಗುಂಪು ಅಸಭ್ಯವಾಗಿ ವರ್ತಿಸುವುದಿಲ್ಲವೆ? ಈ ದೇಶದ ಕಟ್ಟುಪಾಡುಗಳಿಗೆ ಅವನ ವೇಷಭೂಷಣಗಳು ಹೊಂದುವುದಿಲ್ಲವೆಂದು ಹೀಯಾಳಿಸುವುದಿಲ್ಲವೆ? ಅದರ ಬಗ್ಗೆ ನಮ್ಮ ಜನರಿಗೆ ಇರುವ ಅಜ್ಞಾನವು ಅವನನ್ನು ಕ್ಷಮಿಸಿಬಿಡುವುದೇನು? ನನಗೆ ಇನ್ನೂ ಸಂದೇಹವಿದೆ.

''ಇದಕ್ಕೆ ವಿರುದ್ಧವಾಗಿ ಹಿಂದೂಗಳು ಅತ್ಯಂತ ಪವಿತ್ರವೆಂದು ಭಾವಿಸುವ ಶಿವನ ವಿಗ್ರಹಕ್ಕೆ ಹತ್ತು ಹೆಜ್ಜೆಗಳ ದೂರದಲ್ಲಿ ಒಬ್ಬ ಪ್ರೊಟೆಸ್ಟಾಂಟ್ ಮಿಷನರಿಯು ಒಂದು ಮರದ ಕೆಳಗೆ ಉಪದೇಶವನ್ನು ಮಾಡುತ್ತಿದ್ದನು. ಒಂದು ಕುರ್ಚಿಯ ಮೇಲೆ ನಿಂತುಕೊಂಡಿದ್ದನು. ಹಿಂದೂಸ್ತಾನಿ ಭಾಷೆಯಲ್ಲಿ ಕ್ರೈಸ್ತಧರ್ಮದ ಹೆಗ್ಗಳಿಕೆಯನ್ನೂ ಮತ್ತು ವಿಗ್ರಹಾರಾಧಕರ ಪಾಪಗಳನ್ನೂ ಕುರಿತು ಎತ್ತಿಹೇಳುತ್ತಿದ್ದನು. ನಾನು ಅವನ ತೀಕ್ಷ್ಣವಾದ ಧ್ವನಿಯನ್ನು ಕೇಳಿಸಿಕೊಂಡೆನು. ಅವನು ತನ್ನ ಮಾತುಗಳನ್ನು ಜನರ ಗುಂಪಿನೆಡೆ ವಿಷದಂತೆ ಕಾರುತ್ತಿದ್ದನು. ಆದರೆ ಅಲ್ಲಿ ನೆರೆದಿದ್ದ ಜನರು ಬಹಳ ಗೌರವದಿಂದ ಆತನ ಮಾತುಗಳನ್ನು ಗಮನವಿಟ್ಟು ಕೇಳಿಸಿಕೊಳ್ಳುತ್ತಿದ್ದರು. ಆ ಕ್ರೈಸ್ತ ಉಪದೇಶಕನು ಅವರಿಗೆ ಹೇಳುತ್ತಿದ್ದನು: 'ಓ ವಿಗ್ರಹಾರಾಧಕರೇ, ನೀವು ಪೂಜಿಸುವ ಕಪ್ಪುಬಣ್ಣದ ಕಲ್ಲು ಬಂದಿರುವುದು ಒಂದು ಕಲ್ಲಿನ ಗಣಿಯಿಂದ. ಇದಕ್ಕೂ ನನ್ನ ಮನೆಯ ಕಲ್ಲು ಹಾಸುಗಲ್ಲಿಗೂ ವ್ಯತ್ಯಾಸವೇ ಇಲ್ಲ!'

''ಇಷ್ಟೆಲ್ಲ ಅವಾಚ್ಯ ಶಬ್ದಗಳನ್ನು ಅವನು ಆಡುತ್ತಿದ್ದರೂ ಕೂಡ, ಅಲ್ಲಿದ್ದವರಾರೂ ಪಿಸುಗುಟ್ಟಲಿಲ್ಲ. ಅವನ ಪ್ರತಿಯೊಂದು ವಾದವನ್ನೂ ಅವರು ಕೇಳಿಸಿಕೊಂಡರು. ಮಧ್ಯೆ ಮಧ್ಯೆ ಕೆಲವರು ಸಭಿಕರು ಪ್ರಶ್ನೆಗಳನ್ನು ಕೇಳುವರು. ಅದಕ್ಕೆ ಉಪದೇಶಕನು ತನ್ನ ಸಾಮರ್ಥ್ಯಕ್ಕೆ ತಕ್ಕ ಹಾಗೆ ಉತ್ತರಕೊಡುವನು. ಈ ಮಿಷನರಿಯ ಧೈರ್ಯವನ್ನು ಕೊಂಡಾಡಬೇಕು. ಹಿಂದೂಗಳ ಉದಾರತನ ಮಾತ್ರವೇ ಅವನ ಗೌರವವನ್ನು ಉಳಿಸಿತ್ತು. ಹಿಂದೂಗಳು ಇಷ್ಟೊಂದು ಸಹಿಷ್ಣುಗಳಾದರೂ, ಒಬ್ಬ ಕೃತಘ್ನ ಮಿಷನರಿಯು ನನಗೆ ಹೇಳಿದನು: 'ನಮ್ಮ ಪ್ರಯತ್ನಗಳೆಲ್ಲ ವ್ಯರ್ಥವಾಗಿ ಹೋಗಿವೆ. ತನ್ನ ಧರ್ಮದ ವಿಷಯದಲ್ಲಿ ಅಗಾಧ ನಂಬಿಕೆ ಇರುವ ಮನುಷ್ಯನನ್ನು ನಾವು ಮತಾಂತರಗೊಳಿಸಲಾರೆವು. ಆತನು ತನ್ನ ಶರೀರದ ಒಂದು ಅಂಗವನ್ನೂ ಚಲಿಸದೆಯೇ ತನ್ನ ಧರ್ಮದ ಮೇಲಿನ ಎಲ್ಲ ನಿಂದನೆಗಳನ್ನೂ ಕೇಳಿಸಿಕೊಳ್ಳುವನು. (ಆದರೆ ತನ್ನ ಧರ್ಮವನ್ನು ಮಾತ್ರ ತ್ಯಜಿಸುವುದಿಲ್ಲ.)''

ಈ ಮೇಲಿನ ಉಲ್ಲೇಖವು ಸ್ವಾಮಿ ವಿವೇಕಾನಂದರಿಗೆ ಎಷ್ಟೋ ಸಮಾಧಾನವನ್ನು ತಂದಿರಬೇಕು. ಮರಳುಗಾಡಿನ ಮಧ್ಯೆ ಇರುವ ಓಯಸಿಸ್ಸಿನ ಹಾಗೆ ಕಂಡಿರಬೇಕು. ಹೀಗೆಂದೇ ಅವರು ತಮ್ಮ ಸ್ನೇಹಿತರ ಸಲುವಾಗಿ ಅದನ್ನು ತಮ್ಮ ಕೈಬರಹದಲ್ಲಿಯೇ ಇದನ್ನು ಪ್ರತಿ ಮಾಡಿಕೊಂಡಿದ್ದರು. ಆ ದಾಖಲೆ ಪತ್ರದ ಎರಡನೆಯ ಹಾಳೆಯ ಹಿಂಭಾಗದಲ್ಲಿ ಯಾರೋ ಅಜ್ಞಾತ ವ್ಯಕ್ತಿ ಹೀಗೆ ಬರೆದಿದ್ದಾರೆ:

''ಸ್ವಾಮೀಜಿ ಇದನ್ನು ಫೆಬ್ರುವರಿ ೧೨ (ನಿಜಕ್ಕೂ ಅದು ೧೧) ೧೮೯೪ರಂದು ಬರೆದರು. ಅಂದು ಅವರು ಶ್ರೀ ಮತ್ತು ಶ್ರೀಮತಿ ವುಡ್‌ಹೆಡ್ ಮತ್ತು ಕಾರ್ಲ್ ವ್ಯಾನ್ ಬರ್ಗನ್ ಅವರೊಡನೆ ಭೋಜನವನ್ನು ಮಾಡಿ, ಮಧ್ಯಾಹ್ನದ ಮೇಲೆ ತೆರಳಿದರು. ಅದಕ್ಕೆ ಮುಂಚೆ ಅವರು ತಮ್ಮ ಆಧ್ಯಾತ್ಮಿಕ ಸಾಧನೆಗಳ ಬಗ್ಗೆ ಅದ್ಭುತವಾದ ಭಾಷಣವನ್ನು ಮಾಡಿದರು. ಅವರು ಹೇಳಿದರು: 'ಭವಿಷ್ಯದ ಬಗ್ಗೆ ಕಾತರನಾಗಿ ಇರುವವನಿಗೆ ಇರುವುದು ಒಂದೇ ಪರಿಹಾರ: ಭಗವಂತನಿಗೆ ಮಂಡಿಯೂರಿ ಪ್ರಾರ್ಥನೆ ಮಾಡುವುದು.' ಸ್ವಾಮೀಜಿ ಡೆಟ್ರಾಯಿಟ್ ನಗರದಿಂದ ಫೆಬ್ರವರಿ ೧೨, ೧೮೯೪ರಂದು ನಿರ್ಗಮಿಸಿದರು.

*(ಮುಂದುವರಿಯುವುದು)*

''ನೀವು ಹೇಳಬಹುದು. ಪರರ ಧರ್ಮಗಳಲ್ಲಿ ಅನೇಕ ಕುಂದುಕೊರತೆಗಳಿವೆ ಎಂಬುದಾಗಿ. ನನ್ನ ಉತ್ತರ: ಇದ್ದರೆ ತಾನೆ ಏನು? ಪ್ರತಿಯೊಂದು ಧರ್ಮದಲ್ಲೂ ಇದ್ದೇ ಇದೆ. ಎಲ್ಲರೂ ಭಾವಿಸುತ್ತಾರೆ ತಮ್ಮ ಗಡಿಯಾರ ಸರಿಯಾಗಿ ನಡೆದುಕೊಂಡು ಹೋಗುತ್ತಿದೆ ಎಂಬುದಾಗಿ. ಅಂತರ್ಯದಲ್ಲಿ ವ್ಯಾಕುಲತೆ ಇದ್ದರೇ ಯಥೇಷ್ಟ, ಭಗವಂತನಲ್ಲಿ ಪ್ರೀತಿ ಇದ್ದರೇ ಸಾಕು. ಆತ ಅಂತರ್ಯಾಮಿ. ನಮ್ಮ ಅಂತರ್ಯದಲ್ಲಿರುವ ಪ್ರೀತಿ ವ್ಯಾಕುಲತೆ ಏನು ಎಂಬುದನ್ನು ಆತ ಅರಿತುಕೊಳ್ಳಬಲ್ಲ.''

— ಶ್ರೀರಾಮಕೃಷ್ಣ ಪರಮಹಂಸರು